# <u>ಚಿಂತೆ ಯಾತಕೊ ಬಯಲ ಭ್ರಾಂತಿ ಯಾತಕೊ</u>

1. **Ref.:** Shri Purandara Dasara Sahitya Part – 2, Aartha Bhaava, edited by Shri Betageri Krishna Sharma and Shri Bengeri Huchhu Rayaru.
2. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi
3. **Note:** The wordings mentioned without highlights are as per Ref. 1. The wordings given in yellow highlights are as per Ref. 2.
4. **Note:** The singer has followed the wordings in Ref. 1.
5. **Note:** The Ankita is different in both the books. We have considered book in Ref.1 as standard and taken that Ankita for listing.

| | |
|---|---|
| ರಾಗ ಪೂರ್ವಿ ತಾಳ: ರೂಪಕ | ರಾಗ ಪಂತುರಾವಳಿ ತಾಳ: ರೂಪಕ |
| | |
| ಚಿಂತೆ ಯಾತಕೋ ಬಯಲ ಭ್ರಾಂತಿ ಯಾತಕೋ | ಚಿಂತೆ ಯಾತಕೋ ಬಯಲ ಭ್ರಾಂತಿ ಯಾತಕೋ |
| ಕಂತುಪಿತನ ದಿವ್ಯ ನಾಮ ಮಂತ್ರವಿರಲು ಜಪಿಸದೆ ‖ ಪ ‖ | ಕಂತುಪಿತನ ದಿವ್ಯನಾಮ ಮಂತ್ರವಿರಲು ಜಪಿಸುವವಗೆ |
| | |
| ಏಳುತುದಯ ಕಾಲದಲ್ಲಿ | ಕಾಲ ಕಾಲದಲ್ಲಿ ಬಿಡದೆ |
| ವೇಳೆಯರಿತು ಕೂಗುವಂಥ | ವೇಳೆಯರಿತು ಕೂಗುವಂಥ |
| ಕೋಳಿ ತನ್ನ ಮರಿಗೆ ಮೊಲೆಯ | ಕೋಳಿ ತನ್ನ ಮರಿಗೆ ಮೊಲೆಯ |
| ಹಾಲ ಕೊಟ್ಟು ಸಲಹಿತೆ ‖ ೧ ‖ | ಹಾಲ ಕೊಟ್ಟು ಸಲಹಿತೆ |
| | |
| ಸಡಗರದಲಿ ನಾರಿಜನರು | ಸಡಗರದ ನಾರಿಯರು |
| ಹಡೆಯುವಾಗ ಸೂಲಗಿತ್ತಿ | ಹಡೆಯುವಾಗ ಸೂಲಗಿತ್ತಿ |
| ಅಡವಿಯೊಳಗೆ ಹೆರುವ ಮೃಗವ | ಅಡವಿಯೊಳಗೆ ಹೆರುವ ಮೃಗವ |
| ಪಿಡಿದು ರಕ್ಷಣೆ ಮಾಳ್ಪರಾರು ‖ ೨ ‖ | ಹಿಡಿದು ರಕ್ಷಿಸುವರ್ಯಾರು |
| | |
| ಹೆತ್ತ ತಾಯಿ ಸತ್ತ ಶಿಶುವು | ಹೆತ್ತ ತಾಯಿ ಸತ್ತು ಹೋಗಲು |
| ಮತ್ತೆ ಕೆಟ್ಟಿತೆಂಬರು ಜನರು | ಕೆಟ್ಟನೆಂಬರು ಲೋಕ ಜನರು |
| ಹುತ್ತದ ಹಾವಿಗೆ ಗುಬ್ಬಿಗೆ ಮೊಲೆಯ- | ಮತ್ತೆ ಗುಂಗುರಿಗೆ ತಾಯಿ |
| ನಿತ್ತು ರಕ್ಷಣ ಮಾಡುವರಾರು ‖ ೩ ‖ | ಹತ್ತಿರಿದ್ದು ಸಲಹಿತೆ |
| | |
| ಗಟ್ಟಿ ಮಣ್ಣಿನ ಶಿಶುವ ಮಾಡಿ | ಗಟ್ಟಿ ಮಣ್ಣ ಶಿಶುವ ಮಾಡಿ |

ಹೊಟ್ಟೆಯೊಳಗೆ ಇರಿಸುವಂಥ
ಕೊಟ್ಟ ದೈವ ಕೊಂಡೊಯ್ದರೆ
ಕುಟ್ಟಿಕೊಂಡು ಅಳುವುದೇಕೆ || ೪ ||

ಹೊಟ್ಟೆಯೊಳಗೆ ಇರಿಸಲಿಲ್ಲ
ಕೊಟ್ಟ ದೈವ ಕೊಂಡು ಹೋದರೆ
ಕುಟ್ಟಿಕೊಂಡು ಅಳುವೆ ಯಾಕೆ

ನಂಬಿಗೆಗಿವು ಸಾಲವೆಂದು
ಹಂಬಲಿಪುದು ಲೋಕವೆಲ್ಲ
ನಂಬಿ ಪುರಂದರ ವಿಠಲ -
ನೆಂಬ ನಾಮ ನುಡಿದ ಮೇಲೆ || ೫ ||

ಪರದಲ್ಲಿ ಪದವಿಯುಂಟು
ಇಹದಲ್ಲಿ ಸೌಖ್ಯವುಂಟು
ಗುರು ಪುರಂದರ ವಿಠಲನ್ನ
ಸ್ಮರಣೆಯನ್ನು ಮರೆಯದವಗೆ

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

**ಬಯಲ** = ವ್ಯರ್ಥ
**ಸಡಗರ** = ಒಯ್ಯಾರ
**ಕುಟ್ಟಿಕೊಂಡು** = ಬಡಬಡಕೊಂಡು

**Classification:** Keerthane
**Ankita:** purandara vittala
**Location:** NA
**Category:** nAma smaraNe, bhakti
**Group Words:** chinte, manmatha, heNNu, kaadu, tayi, daiva, uraga, prani,
**Pravachana:** NA
**Explanation:** NA